# ಮಗು ಸ್ನೇಹಿ ಸಮಾಜಕ್ಕಾಗಿ

# ಶಿಕ್ಷಣ ಸಂಚಲನ

2017–18
ಸಂಚಿಕೆ – 4

## ಸಂಪಾದಕೀಯ

ಗುಣಾತ್ಮಕ ಶಿಕ್ಷಣ ಎಂಬುದು ಅನೇಕ ಆಯಾಮಗಳನ್ನು ಹೊಂದಿದ್ದರೂ ಶಾಲೆ ಮತ್ತು ಸಮುದಾಯಗಳಲ್ಲಿ ಮಗುಸ್ನೇಹಿ ವಾತಾವರಣ ನಿರ್ಮಾಣ ಮಾಡಿದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯ ಜತೆಗೆ ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ  ಮೌಲ್ಯಯುತ ಶಿಕ್ಷಣವನ್ನು ದೊರಕಿಸಿಕೊಡಬಹುದು ಎಂಬ ಪರಿಕಲ್ಪನೆಯ ಸಾಕಾರಕ್ಕಾಗಿ ಪಡಿ ಸಂಸ್ಥೆಯು ಎರಡು ದಶಕಗಳಿಂದಲೂ ಕಾರ್ಯನಿರ್ವಹಿಸುತ್ತಾ ಬರುತ್ತಿದೆ, ಇದರ ಮುಂದುವರಿದ ಭಾಗವಾಗಿ  ಪಡಿ ಸಂಸ್ಥೆಯು ಮಗುಸ್ನೇಹಿ ವಾತಾವರಣ ನಿರ್ಮಾಣ ಪ್ರಕ್ರಿಯೆಯಲ್ಲಿ "ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳಸ್ನೇಹಿ ಸಮಾಜ ನಿರ್ಮಾಣ" ಎಂಬ ಶಿರ್ಷಿಕೆಯಲ್ಲಿ ಕಳೆದ 3 ವರ್ಷಗಳಿಂದ ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಸಾಕಷ್ಟು ಫಲಿತಾಂಶ ಮತ್ತು ಕಲಿಕೆಯನ್ನು ಕಂಡುಕೊಂಡಿದೆ. ಈ ಕಲಿಕೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಿ ಮಗುಸ್ನೇಹಿ ವಾತಾವರಣ ನಿರ್ಮಾಣ ಪ್ರಕ್ರಿಯೆಯನ್ನು 24 ಶಾಲೆಯಿಂದ  6 ಕ್ಲಸ್ಟರ್‌ನ  52 ಶಾಲೆಗಳಿಗೆ ವಿಸ್ತರಿಸಲಾಗಿದ್ದು,  ಮಗುಸ್ನೇಹಿ ಶಾಲಾ ಸೂಚಕ ಪಟ್ಟಿಯನ್ನು ತನ್ನ ಹಿಂದಿನ ಯೋಜನೆಯ ಕಲಿಕೆಯ ಅಧಾರದಲ್ಲಿ ಸಾಕಷ್ಟು ಮಾರ್ಪಾಡುಗೊಳಿಸಿ ಮಗುಸ್ನೇಹಿ ಶಾಲಾ ಪರಿಕಲ್ಪನೆಯನ್ನು ಅನುಷ್ಠಾನ ಮಾಡುವಲ್ಲಿ ಮುಂದಡಿಯಿಟ್ಟಿದೆ.

ಉಡುಪಿ  ಮತ್ತು ದ.ಕ ಜಿಲ್ಲೆಯ 6 ಕ್ಲಸ್ಟರ್‌ನ 52 ಶಾಲೆ ಮತ್ತು 15 ಪಂಚಾಯತುಗಳನ್ನು ಆಯ್ಕೆ ಮಾಡಿ ಹಂತ ಹಂತವಾಗಿ ಯೋಜನೆಯ ಸಾಕಾರಕ್ಕಾಗಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ. ಅದರಲ್ಲೂ ಪ್ರಮುಖವಾಗಿ ಎಸ್.ಡಿ.ಎಮ್.ಸಿ ತರಬೇತಿ ಮತ್ತು ಬಲವರ್ಧನೆ, ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ, ಶಾಲೆಗಳಲ್ಲಿ ವಿವಿಧ ಕ್ಲಬ್‌ಗಳ ಬಲವರ್ಧನೆ, ಅರಿವು ಕಾರ್ಯಕ್ರಮ, ಪಂಚಾಯತು ಸದಸ್ಯರಿಗೆ ತರಬೇತಿ, ಮಕ್ಕಳ ರಕ್ಷಣಾ ಸಮಿತಿಯ ಅನುಷ್ಠಾನ, ಮಗುಸ್ನೇಹಿ ವಾತಾವರಣಕ್ಕಾಗಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚನಾ ಸಭೆಗಳು ಮತ್ತು ವಕಾಲತ್ತು ಪ್ರಕ್ರಿಯೆಗಳು, ಡಿ.ಎಲ್.ಇಡಿ ಪಠ್ಯಕ್ರಮ ಮತ್ತು ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ಹಂತದಲ್ಲಿ ಮಗುಸ್ನೇಹಿ ಪರಿಕಲ್ಪನೆಯ ಅಳವಡಿಕೆಗಾಗಿ ಕಾರ್ಯಕ್ರಮಗಳು ಹಾಗೂ ರಾಜ್ಯಮಟ್ಟದಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಕಾರ್ಯಾಗಾರಗಳು ಮತ್ತು ವಕಾಲತ್ತು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮುಖ್ಯವಾಗಿ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಮಕ್ಕಳ ರಕ್ಷಣೆ ಮತ್ತು ಗುಣಮಟ್ಟದ ಶಿಕ್ಷಣದಲ್ಲಿ ಸಕಾರಾತ್ಮಕ ಪರಿವರ್ತನೆಯೊಂದಿಗೆ  ಸಮುದಾಯದಲ್ಲಿ ಮಕ್ಕಳ ಸ್ನೇಹಿ  ವಾತಾವರಣ ನಿರ್ಮಾಣಕ್ಕಾಗಿ ಯೋಜನೆಯನ್ನು ಹಾಕಿಕೊಂಡು ಅನುಷ್ಠಾನ ಮಾಡುವಲ್ಲಿ ಕಾರ್ಯಪ್ರವೃತ್ತವಾಗಿದೆ.

ಈ ಪ್ರಕ್ರಿಯೆಯಲ್ಲಿ ಪಡಿ ಸಂಸ್ಥೆಯು ತನ್ನ  ಯೋಜನಾ ವ್ಯಾಪ್ತಿಯಲ್ಲಿ ಯೋಜನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಲ್ಲಿ ಇಲಾಖೆಗಳು, ವಿವಿಧ ಸಂಘ ಸಂಸ್ಥೆಗಳ ಸಹಕಾರಗಳು ಯೋಜನಾ ವ್ಯಾಪ್ತಿಯಲ್ಲಿ ದೊರಕುತ್ತಿದ್ದು, ಶಾಲಾಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಹೆಚ್ಚಾಗುತ್ತಿದೆ. ಅಲ್ಲದೆ ಎಸ್.ಡಿ.ಎಮ್.ಸಿಯು ಶಾಲಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬರುತ್ತಿದೆ. ಇದು ಯೋಜನೆಯ ಪ್ರಥಮಾರ್ಧವಾಗಿದ್ದು  ಈ ಎಲ್ಲಾ ಪ್ರಕ್ರಿಯೆಯಲ್ಲಿ ಸಾಕಷ್ಟು ಕಲಿಕೆ ಮತ್ತು ಫಲಿತಾಂಶವನ್ನು ಕಂಡುಕೊಂಡಿದೆ. ಇದರ ಒಂದು ದಾಖಲೀಕರಣ ಮತ್ತು ಪ್ರಸ್ತುತಪಡಿಸುವ ಸಲುವಾಗಿ  ಪಡಿಯು  2017–18ರಲ್ಲಿ  ನಡೆಸಿದ ಈ ಒಂದು ಪ್ರಯತ್ನವನ್ನು  "ಶಿಕ್ಷಣ ಸಂಚಲನ"ದ ಮೂಲಕ ಹೊರತರುತ್ತಿದೆ. ಹಾಗೂ ಉಡುಪಿ ಮತ್ತು ದ.ಕ ಜಿಲ್ಲೆಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಮತ್ತು ಅದರ ಘಟಕಗಳ ಸಹಕಾರಗಳಿಂದ ಮತ್ತು ಅವರುಗಳು ಹಮ್ಮಿಕೊಳ್ಳುವ ಕಾರ್ಯಚಟುವಟಿಕೆಗಳು ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಗುಸ್ನೇಹಿ ವಾತಾವರಣ ನಿರ್ಮಾಣಕ್ಕೆ ಪೂರಕವಾಗಿದೆ, ಅಲ್ಲದೆ ಈ ಒಂದು ಪ್ರಕ್ರಿಯೆಯಲ್ಲಿ ಸಹಕಾರ ನೀಡಿದ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಪಂಚಾಯತ್‌ರಾಜ್ ಇಲಾಖೆಗಳು ಮತ್ತು ಸಮಾನ ಮನಸ್ಕ ಸಂಘಟನೆಗಳಿಗೂ ಈ ಸಂದರ್ಭದಲ್ಲಿ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇವೆ.



# ಮಗುಸ್ನೇಹಿ ವಾತಾವರಣ ನಿರ್ಮಾಣಕ್ಕಾಗಿ ನಡೆಸಿದ ಪ್ರಯತ್ನಗಳು

## ಅ. ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣಕ್ಕಾಗಿ ನಡೆಸಿದ ಕಾರ್ಯಚಟುವಟಿಕೆಗಳು.

1. **ವಾಸ್ತವ ಸ್ಥಿತಿಯ ಅಧ್ಯಯನ ಮತ್ತು ಶಾಲೆಗಳ ಆಯ್ಕೆ:** ಮಗುಸ್ನೇಹಿ ಶಾಲಾ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಶಾಲೆಯ ಆಯ್ಕೆಗಾಗಿ ದತ್ತಾಂಶ ಸಂಗ್ರಹಣೆ ಮತ್ತು ವಾಸ್ತವ ಸ್ಥಿತಿಯ ಅಧ್ಯಯನವನ್ನು ಉಡುಪಿ ಮತ್ತು ದ.ಕ ಜಿಲ್ಲೆಯ 6 ಕ್ಲಸ್ಟರ್‌ನ 52 ಶಾಲೆ 15 ಪಂಚಾಯತುಗಳಲ್ಲಿ ಸಂಪನ್ಮೂಲ ವ್ಯಕ್ತಿಗಳು ವಿವಿಧ ಮಾನದಂಡಗಳ ಆಧಾರದಲ್ಲಿ ದತ್ತಾಂಶವನ್ನು ಕಲೆ ಹಾಕಿ ವಸ್ತು ಸ್ಥಿತಿಯ ಅಧ್ಯಯನವನ್ನು ನಡೆಸಿ ಶಾಲೆಗಳ ಆಯ್ಕೆ, ಬದಲಾವಣೆ ಬಯಸುವ ಪ್ರಮುಖ ಕ್ಷೇತ್ರಗಳ ಆಯ್ಕೆ ಹಾಗೂ ಸೂಚ್ಯಂಕಗಳನ್ನು ನಿಗದಿಪಡಿಸಲು ಈ ಅಧ್ಯಯನವನ್ನು ನಡೆಸಲಾಯಿತು.

2. **ಸಂಪನ್ಮೂಲ ವ್ಯಕ್ತಿಗಳಿಗೆ ಎಸ್.ಡಿ.ಎಮ್.ಸಿಯು ಕಾರ್ಯವೈಖರಿಯ ಬಗ್ಗೆ, ಮಗು ಸ್ನೇಹಿ ಪಂಚಾಯತು ಮತ್ತು ಮಕ್ಕಳ ರಕ್ಷಣಾ ಸಮಿತಿಯ ಮೌಲ್ಯಮಾಪನ ಮಾಡುವ ಕುರಿತಂತೆ ತರಬೇತಿ :**

   ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣಕ್ಕಾಗಿ ಶಾಲೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾಲುದಾರ ಸಮಿತಿಯಾದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಯಾವ ರೀತಿ ಶಾಲಾಭಿವೃದ್ಧಿಯಲ್ಲಿ ತನ್ನ ಕೊಡುಗೆಯನ್ನು ನೀಡುತ್ತಿದೆ ಮತ್ತು ಅದರ ಕಾರ್ಯವೈಖರಿಯ ಕುರಿತಂತೆ ಮೌಲ್ಯಮಾಪನವನ್ನು ಅಭಿವೃದ್ಧಿ ಪಡಿಸಿದ ಪ್ರಶ್ನಾವಳಿಯ ಮೂಲಕ ಆಯಾಯ ಶಿಕ್ಷಣ ಸಂಪನ್ಮೂಲ ಕೇಂದ್ರದಿಂದ ನಿಯೋಜಿಸಲ್ಪಟ್ಟ ಸಂಪನ್ಮೂಲ ವ್ಯಕ್ತಿಗಳಿಗೆ ಹೇಗೆ ಮೌಲ್ಯಮಾಪನ ಮಾಡಬೇಕು ಮತ್ತು ಮೌಲ್ಯಮಾಪನ ಮಾಡುವಾಗ ಯಾವೆಲ್ಲಾ ಅಂಶಗಳನ್ನು ಗಮನಿಸಬೇಕು ಮತ್ತು ಯಾವೆಲ್ಲಾ ದಾಖಲೆಗಳ ಪರೀಶೀಲನೆ ಮಾಡಬೇಕು ಎಂಬುದರ ಕುರಿತಂತೆ ಮತ್ತು



ಸಂಪನ್ಮೂಲ ವ್ಯಕ್ತಿಗಳಿಗೆ ಮೌಲ್ಯಮಾಪನ ಮಾಡುವ ಕುರಿತಂತೆ ತರಬೇತಿ

   ಮಗುಸ್ನೇಹಿ ಪಂಚಾಯತು ಹಾಗೂ ಮಕ್ಕಳ ರಕ್ಷಣಾ ಸಮಿತಿಯ ಕುರಿತಂತೆ ಮೌಲ್ಯ ಮಾಪನ ನಡೆಸುವುದರ ಬಗ್ಗೆ ತರಬೇತಿಯು ದಿನಾಂಕ 06.09.2017 ರಂದು ಪಡಿ ಸಂಸ್ಥೆಯ ಕಛೇರಿಯಲ್ಲಿ ನಡೆಯಿತು. ಪ್ರಮುಖವಾಗಿ ತರಬೇತಿಯಲ್ಲಿ ಮಗುಸ್ನೇಹಿ ವಾತಾವರಣ ನಿರ್ಮಾಣ ಮಾಡುವಲ್ಲಿ ಉದ್ದೇಶಿತ ಗುಂಪು ಯಾವ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂಬುದರ ಆಧಾರದಲ್ಲಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಾಗಲು ತರಬೇತಿ ಕೈಪಿಡಿಯನ್ನು ರೂಪಿಸಲು ಈ ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ತರಬೇತಿಯನ್ನು ನೀಡಲಾಯಿತು.

3. **ಕ್ಲಸ್ಟರ್ ಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಶಾಲೆ, ಪಂಚಾಯತು ಮತ್ತು ಮಕ್ಕಳ ರಕ್ಷಣಾ ಸಮಿತಿಯ ಮೌಲ್ಯಮಾಪನ:**

   ಮಗುಸ್ನೇಹಿ ವಾತಾವರಣ ನಿರ್ಮಾಣ ಯೋಜನೆಗೆ ಆಯ್ಕೆಯಾದ ಉಡುಪಿ ಮತ್ತು ದ.ಕ ಜಿಲ್ಲೆಯ 6 ಕ್ಲಸ್ಟರ್‌ನ 52 ಶಾಲೆ, 15 ಪಂಚಾಯತು ಮತ್ತು ಅದರಲ್ಲಿ ಅಸ್ತಿತ್ವದಲ್ಲಿರಬೇಕಾದ 15 ಮಕ್ಕಳ ರಕ್ಷಣಾ ಸಮಿತಿಯ ವಸ್ತು ಸ್ಥಿತಿ ಅಧ್ಯಯನವನ್ನು ನಿಯೋಜಿಸಲ್ಪಟ್ಟ ಸಂಪನ್ಮೂಲ ವ್ಯಕ್ತಿಗಳು ಕ್ಷೇತ್ರ ಭೇಟಿ ಮಾಡಿ ಉದ್ದೇಶಿತ ಗುಂಪುಗಳೊಂದಿಗೆ ಚರ್ಚಿಸಿ ದಾಖಲೆಗಳನ್ನು ಪರೀಶೀಲಿಸಿ ಅಭಿವೃದ್ಧಿ ಪಡಿಸಿದ ಪ್ರಶ್ನಾವಳಿಯ ಮೂಲಕ ಮೌಲ್ಯಮಾಪನ ಮಾಡಿ ಪಡಿ ಸಂಸ್ಥೆಗೆ ವರದಿಯನ್ನು ಸಲ್ಲಿಸಿದ್ದು ಅದನ್ನು ಕ್ರೂಢೀಕರಿಸಿ, ವಿಶ್ಲೇಷಿಸಿ ತರಬೇತಿ ಅವಶ್ಯಕತೆ ಇರುವ ಕ್ಷೇತಗಳಲ್ಲಿ ಗುರುತಿಸಿ ತರಬೇತಿ ಕೈಪಿಡಿ ರಚಿಸಲು ಈ ಮೌಲ್ಯಮಾಪನ ಅನುಕೂಲವಾಯಿತು.



ಸಂಪನ್ಮೂಲ ವ್ಯಕ್ತಿಗಳಿಂದ ಮೌಲ್ಯಮಾಪನ

4. **ಎಸ್.ಡಿ.ಎಮ್.ಸಿ ತರಬೇತಿ ಕೈಪಿಡಿ ರಚನೆ ಮಾಡುವಲ್ಲಿ ಸಮಾಲೋಚನಾ ಸಭೆ:**

   ಸಂಪನ್ಮೂಲ ವ್ಯಕ್ತಿಗಳು ಕ್ಷೇತ್ರ ಭೇಟಿ ಮಾಡಿ ಸಲ್ಲಿಸಿದ ವರದಿಯ

ಆಧಾರದಲ್ಲಿ ಮತ್ತು ಶಾಲೆ ಮತ್ತು ಎಸ್.ಡಿ.ಎಮ್.ಸಿ ಕ್ಷೇತ್ರದಲ್ಲಿ ಅನುಭವವಿರುವ ತಜ್ಞರನ್ನು ಒಳಗೊಂಡಂತೆ ತರಬೇತಿ ಕೈಪಿಡಿಯನ್ನು ರಚಿಸಲು ದಿನಾಂಕ 27.11.2017 ರಂದು ಪಡಿ ಸಂಸ್ಥೆಯಲ್ಲಿ ಸಮಾಲೋಚನಾ ಸಭೆಯನ್ನು ಆಯೋಜಿಸಲಾಯಿತು. ಈ ಸಮಾಲೋಚನಾ ಸಭೆಯಲ್ಲಿ ಎಸ್.ಡಿ.ಎಮ್.ಸಿಯಲ್ಲಿದ್ದು ಉತ್ತಮ ಕಾರ್ಯನಿರ್ವಹಿಸಿ ಶಾಲೆಯನ್ನು ಅಭಿವೃದ್ಧಿಪಡಿಸಿದ ಎಸ್.ಡಿ.ಎಮ್.ಸಿ ಸದಸ್ಯರು, ಶಾಲೆ ಮತ್ತು ಎಸ್.ಡಿ.ಎಮ್.ಸಿಗೆ ಈಗಾಗಲೇ ತರಬೇತಿಯನ್ನು ನೀಡಿ ಅನುಭವವಿರುವ ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಂಡು ತರಬೇತಿ ಕೈಪಿಡಿಯಲ್ಲಿ ಯಾವೆಲ್ಲಾ ಅಂಶಗಳು ಒಳಗೊಳ್ಳಬಹುದೆಂಬುದರ ಬಗ್ಗೆ ಚರ್ಚೆ ನಡೆಸಲಾಯಿತು ಮತ್ತು ಕೈಪಿಡಿಯಲ್ಲಿ ಎಸ್.ಡಿ.ಎಮ್.ಸಿ ಸದಸ್ಯರಿಗೆ ಯಾವೆಲ್ಲಾ ಕ್ಷೇತ್ರದಲ್ಲಿ ತರಬೇತಿಯ ಅವಶ್ಯಕತೆ ಇದೆ ಎಂಬುದರ ಕುರಿತಂತೆ ತೀರ್ಮಾನಿಸಲಾಯಿತು. ಕೈಪಿಡಿ ಅಂತಿಮೀಕರಣಗೊಳಿಸಲು ಜವಾಬ್ದಾರಿಯನ್ನು ಹಂಚಲಾಯಿತು.



ಎಸ್.ಡಿ.ಎಮ್.ಸಿ. ತರಬೇತಿ ಕೈಪಿಡಿ ರಚನಾ ಕಾರ್ಯಗಾರ

5. **ಎಸ್.ಡಿ.ಎಮ್.ಸಿ ತರಬೇತುದಾರರಿಗೆ (ಸಂಪನ್ಮೂಲ ವ್ಯಕ್ತಿಗಳಿಗೆ) ತರಬೇತಿ:**

ಎಸ್.ಡಿ.ಎಮ್.ಸಿ ತರಬೇತುದಾರರಿಗೆ ತರಬೇತಿ ಕೈಪಿಡಿಯಲ್ಲಿನ ಅಂಶಗಳ ಕುರಿತು ತರಬೇತಿ ಹಾಗೂ ತರಬೇತುದಾರರು



ಎಸ್.ಡಿ.ಎಮ್.ಸಿ ತರಬೇತುದಾರರಿಗೆ ತರಬೇತಿ

ಎಸ್.ಡಿ.ಎಮ್.ಸಿಯು ಶಾಲಾಭಿವೃದ್ದಿಯಲ್ಲಿ ತಮ್ಮನ್ನು ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತೆ ಪ್ರೇರೆಪಿಸುವುದರ ಜೊತೆಗೆ ಅವರ ಪಾತ್ರ ಮತ್ತು ಜವಾಬ್ದಾರಿಗಳ ಅರಿವನ್ನು ಮೂಡಿಸುವುದರ ಜತೆಗೆ ಹೇಗೆ ತರಬೇತಿ ನೀಡಬಹುದು ಎಂಬುದರ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಗೆ ದಿನಾಂಕ 19.12.2017ರಂದು ಪಡಿ ಸಂಸ್ಥೆಯ ಕಛೇರಿಯಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ಎಸ್.ಡಿ.ಎಮ್.ಸಿ ಸಮಿತಿಗಳಿಗೆ ವಿವಿಧ ಹಂತಗಳಲ್ಲಿ ವಿವಿಧ ವಿಷಯಗಳಲ್ಲಿ ತರಬೇತಿ ನೀಡುವುದರ ಜೊತೆಗೆ ನಿರಂತರ ಅನುಸರಣೆ ಮಾಡುವುದರ ಬಗ್ಗೆ ಚರ್ಚಿಸಲಾಯಿತು.

6. **ಎಸ್.ಡಿ.ಎಮ್.ಸಿ ತರಬೇತಿ ಮೊದಲ ಹಂತ:**

ಉಡುಪಿ ಜಿಲ್ಲೆಯ ಬೈಲೂರು ಮತ್ತು ತಲ್ಲೂರು ಹಾಗೂ ದ.ಕ ಜಿಲ್ಲೆಯ ಮದ್ವ, ಉಜಿರೆ, ಹಾರಾಡಿ, ಆಲೆಟ್ಟಿ ಕ್ಲಸ್ಟರ್‌ನ 52 ಶಾಲೆಗಳಿಗೆ ಮೊದಲ ಹಂತದಲ್ಲಿ ಎಸ್.ಡಿ.ಎಮ್.ಸಿಯ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ತರಬೇತಿಯನ್ನು ಆಯಾಯ ಶಾಲೆಗಳಲ್ಲಿ ನಿಯೋಜಿಸಲ್ಪಟ್ಟ ಸಂಪನ್ಮೂಲ ವ್ಯಕ್ತಿಗಳು ಡಿಸೆಂಬರ್ ತಿಂಗಳಲ್ಲಿ ನೀಡಿದರು. ಎಸ್.ಡಿ.ಎಮ್.ಸಿ ಸಮಿತಿಯು ಶಾಲೆಗಳಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಸರಿಯಾದ ಮಾರ್ಗದರ್ಶನ ಮತ್ತು ತರಬೇತಿಯ ಅವಶ್ಯಕತೆಯನ್ನು ಎಲ್ಲಾ ಎಸ್.ಡಿ.ಎಮ್.ಸಿ ಸದಸ್ಯರು ಈ ತರಬೇತಿಯಲ್ಲಿ ಕಂಡುಕೊಂಡರು. ಅಲ್ಲದೇ ತರಬೇತಿಯು ಚಟುವಟಿಕೆಯಾಧಾರಿತವಾಗಿ ಮತ್ತು ಚಿತ್ರಾತ್ಮಕ ತರಬೇತಿ ಪರಿಕರಗಳ ಮೂಲಕ ಅರ್ಥೈಸಲಾಯಿತು.



ಶಾಲಾಮಟ್ಟದಲ್ಲಿ ಎಸ್.ಡಿ.ಎಂ.ಸಿ ತರಬೇತಿ–ಮೊದಲ ಹಂತ

7. **ಎಸ್.ಡಿ.ಎಮ್.ಸಿ ತರಬೇತಿ ಎರಡನೇ ಹಂತ :**

ಮೊದಲ ಹಂತದಲ್ಲಿ ಎಸ್.ಡಿ.ಎಮ್.ಸಿ ಸದಸ್ಯರಿಗೆ ಅವರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ತರಬೇತಿಯನ್ನು ನೀಡಿದ ನಂತರ ಅದರ ಮುಂದುವರಿದ ಭಾಗವಾಗಿ ಎಸ್.ಡಿ.ಎಮ್.ಸಿ ಸದಸ್ಯರಿಗೆ ಶಾಲಾಭಿವೃದ್ಧಿ ಯೋಜನೆಯನ್ನು ಹೇಗೆ ತಯಾರಿಸಬೇಕು ಎಂಬುದರ ಬಗ್ಗೆ ತರಬೇತಿಯನ್ನು ಎರಡನೇ ಹಂತದಲ್ಲಿ ನೀಡಲಾಯಿತು. ಈ ತರಬೇತಿಯಲ್ಲಿ ಶಾಲಾಭಿವೃದ್ಧಿ

ಯೋಜನೆಯ ಪರಿಕಲ್ಪನೆ ಮತ್ತು ಅವಶ್ಯಕತೆ, ಅದರ ಪ್ರಕ್ರಿಯೆ ಮತ್ತು ಅನುಷ್ಠಾನದ ಅಂಶಗಳ ಕುರಿತಂತೆ ತರಬೇತಿಯ ಜೊತೆಗೆ ಮುಖ್ಯವಾಗಿ ಶಾಲಾ ಮೂಲಭೂತ ಸೌಕರ್ಯ, ಮಕ್ಕಳ ಕಲಿಕಾ ಗುಣಮಟ್ಟ, ಸಮುದಾಯದ ಭಾಗವಹಿಸುವಿಕೆ ಮತ್ತು ಮಕ್ಕಳ ರಕ್ಷಣೆ ಮುಂತಾದ ಪ್ರಮುಖ ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ರೂಪಿಸುವುದರ ಜತೆಗೆ ಸಂಪನ್ಮೂಲಗಳ ಕ್ರೋಢೀಕರಣದ ಬಗ್ಗೆಯು ತರಬೇತಿಯನ್ನು ಉಡುಪಿ ಮತ್ತು ದ.ಕ ಜಿಲ್ಲೆಯ 6 ಕ್ಲಸ್ಟರ್‌ನ 52 ಶಾಲೆಗಳ ಎಸ್.ಡಿ.ಎಮ್.ಸಿ ಸದಸ್ಯರಿಗೆ 2018 ರ ಮಾರ್ಚ್ ತಿಂಗಳಲ್ಲಿ ತರಬೇತಿಯನ್ನು ನೀಡಲಾಯಿತು.




ಶಾಲಾಮಟ್ಟದಲ್ಲಿ ಎಸ್.ಡಿ.ಎಂ.ಸಿ ತರಬೇತಿ–ಎರಡನೇ ಹಂತ

8. **ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ: ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡದ ಪರಿಕಲ್ಪನೆ ಮತ್ತು ಸ್ವರೂಪ ರಚನೆಗಾಗಿ ರಂಗ ತರಬೇತಿ ನುರಿತರೊಂದಿಗೆ ಸಮಾಲೋಚನೆ:**

ದಿನಾಂಕ 3.10.2017ರಂದು ಪಡಿ ಸಭಾಂಗಣದಲ್ಲಿ ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ ಪರಿಕಲ್ಪನೆಯ ಸಾಕಾರಕ್ಕಾಗಿ ಮತ್ತು ರಂಗ ತಂಡದ ರೂಪುರೇಷೆಗಳು ಮತ್ತು ಸ್ವರೂಪದ ಬಗ್ಗೆ ಚರ್ಚಿಸಲು ರಂಗ ಅಭಿಯಾನ, ನಾಟಕ ಕಲೆಗಳಲ್ಲಿ ಅನುಭವವಿರುವ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಈ



ರಂಗ ತರಬೇತುದಾರರೊಂದಿಗೆ ಸಮಾಲೋಚನೆ

ಸಮಾಲೋಚನಾ ಸಭೆಯಲ್ಲಿ ರಂಗ ಕಲಾ ತಜ್ಞರಾದ ಸದಾನಂದ ಬೈಂದೂರು, ಶೀನ ನಡೋಳಿ, ನಾದ ಮಣಿನಾಲ್ಕೂರು, ಗೋಪಾಲ ಅಂಚನ್, ನಂದರಾಜ್, ಸಂಶುದ್ದೀನ್, ರಾಜಾರಾಮ್, ರಂಜನಿ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರದ ಪ್ರತಿನಿಧಿಗಳು ಭಾಗವಹಿಸಿದ್ದು ಮಕ್ಕಳ ರಂಗತಂಡದ ಪರಿಕಲ್ಪನೆ, ಧ್ಯೇಯ ಗೀತೆ, ಸ್ವರೂಪ, ಸಮಯಾವಧಿ, ವಿಷಯ ವಸ್ತುಗಳ ಆಯ್ಕೆಯ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಅಲ್ಲದೆ ಮಕ್ಕಳ ರಂಗ ಅಭಿಯಾನದ ಉದ್ದೇಶವು ಸಮುದಾಯದ ಭಾಗವಹಿಸುವಿಕೆಯೊಂದಿಗೆ ಮಕ್ಕಳ ರಕ್ಷಣೆ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು ಪ್ರಮುಖ ಆಶಯವಾಗಿ ಹೊರಹೊಮ್ಮಿತು.

9. **ಮಕ್ಕಳ ಹಕ್ಕುಗಳ ರಂಗ ತಂಡದ ರಚನೆ:**

ಉಡುಪಿ ಜಿಲ್ಲೆಯ ಬೈಲೂರು, ತಲ್ಲೂರು ಕ್ಲಸ್ಟರ್ ಮತ್ತು ದ.ಕ ಜಿಲ್ಲೆಯ ಮದ್ವ, ಉಜಿರೆ, ಹಾರಾಡಿ ಮತ್ತು ಆಲೆಟ್ಟಿ ಕ್ಲಸ್ಟರ್‌ನಲ್ಲಿ 6 ರಂಗ ತಂಡಗಳ ರಚನೆಯನ್ನು ಆಯಾ ತಾಲೂಕಿನ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಕಾರದೊಂದಿಗೆ ಮಗುಸ್ನೇಹಿ ಪರಿಕಲ್ಪನೆಯ ಶಾಲೆಗಳ ಮಕ್ಕಳನ್ನು ವಿವಿಧ ಮಾನದಂಡ ಮತ್ತು ಪ್ರಾತಿನಿಧ್ಯಗಳನುಸಾರವಾಗಿ ಹೆತ್ತವರ ಅನುಮತಿಯೊಂದಿಗೆ ಕ್ಲಸ್ಟರ್ ಮಟ್ಟದಲ್ಲಿ 25 ರಿಂದ 30 ಮಕ್ಕಳನ್ನೊಳಗೊಂಡ ಮಕ್ಕಳ ಹಕ್ಕುಗಳ ರಂಗ ತಂಡವನ್ನು ನವೆಂಬರ್ ತಿಂಗಳಲ್ಲಿ ರಚಿಸಲಾಯಿತು.




ರಂಗ ತಂಡದ ರಚನೆ ಮತ್ತು ಉದ್ಘಾಟನೆ

10. **ಮಕ್ಕಳ ಹಕ್ಕುಗಳ ರಂಗ ತಂಡಕ್ಕೆ ತರಬೇತಿ :** ಮಕ್ಕಳ ಹಕ್ಕುಗಳ ರಂಗ ತಂಡಗಳಿಗೆ ಡಿಸೆಂಬರ್ ತಿಂಗಳಲ್ಲಿ ಅಭಿನಯ ತರಬೇತಿಯೊಂದಿಗೆ ಹಾಡು, ನೃತ್ಯ, ಮತ್ತು ಮಾತುಗಾರಿಕೆಯ ಕುರಿತು ತರಬೇತಿ ಕಾರ್ಯಾಗಾರವನ್ನು ಆಯಾಯ ತಾಲೂಕಿನ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ನೇತೃತ್ವದಲ್ಲಿ ನಡೆಯಿತು. ಕುಂದಾಪುರ ತಾಲೂಕಿನಲ್ಲಿ ಸದಾನಂದ ಬೈಂದೂರುರವರು, ಕಾರ್ಕಳ ತಾಲೂಕಿನಲ್ಲಿ ಬಾಸುಮ ಕೊಡಗು, ಬೆಳ್ತಂಗಡಿಯಲ್ಲಿ ರಾಜಾರಾಂ ಮತ್ತು

ರಂಜನಿಯವರು, ಪುತ್ತೂರಿನಲ್ಲಿ ಸಂಶುದ್ದಿನ್ ಸಂಪ್ಯರವರು, ಸುಳ್ಯದಲ್ಲಿ ರಾಜ್‌ಮುಖೇಶ್ ಹಾಗೂ ಬಂಟ್ವಾಳದಲ್ಲಿ ಗೋಪಾಲ ಅಂಚನ್ ರವರು ತರಬೇತಿಯನ್ನು ನೀಡಿ ರಂಗ ತಂಡವನ್ನು ಸಜ್ಜುಗೊಳಿಸಿದರು. ತರಬೇತಿಯಲ್ಲಿ ಮಕ್ಕಳ ಹಕ್ಕು ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಸಮುದಾಯಕ್ಕೆ ಅರಿವು ಮೂಡಿಸುವ ಅಂಶಗಳು ಪ್ರಮುಖ ವಿಷಯ ವಸ್ತುಗಳಾಗಿತ್ತು.



ಮಕ್ಕಳ ಹಕ್ಕುಗಳ ರಂಗ ತಂಡಕ್ಕೆ ತರಬೇತಿ

**11. ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳ ಪ್ರದರ್ಶನ:**

ತರಬೇತಿ ಪಡೆದ ಮಕ್ಕಳ ರಂಗ ತಂಡಗಳು ಸಮುದಾಯದತ್ತ ಶಾಲೆ, ಶಾಲಾ ವಾರ್ಷಿಕೋತ್ಸವ ಮತ್ತು ಇತರ ಜಾಗೃತಿ ಕಾರ್ಯಕ್ರಮಗಳಲ್ಲಿ ತಮ್ಮ ಪ್ರದರ್ಶನವನ್ನು ನೀಡಿ ಸಮುದಾಯದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ನೀಡುತ್ತಾ ಬರುತ್ತಿದೆ. ಶಿಕ್ಷಣ ಸಂಪನ್ಮೂಲ ಕೇಂದ್ರಗಳು ತಮ್ಮ ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ತಂಡಗಳ ಜವಾಬ್ದಾರಿಯನ್ನು ವಹಿಸಿಕೊಂಡು ತಾಲೂಕಿನಾದ್ಯಂತ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ.



ರಂಗ ತಂಡಗಳ ಪ್ರದರ್ಶನ

**12. ಗ್ರಾಮ ಪಂಚಾಯತು ತರಬೇತಿ ಕೈಪಿಡಿ ರಚನೆ:**

ಮಗುಸ್ನೇಹಿ ಪಂಚಾಯತು ನಿರ್ಮಾಣ ಪ್ರಕ್ರಿಯೆಯಲ್ಲಿ ಪಂಚಾಯತು ಸದಸ್ಯರಿಗೆ, ಪಂಚಾಯತು ಸಿಬ್ಬಂದಿಗಳಿಗೆ ಮಗುಸ್ನೇಹಿ ಪರಿಕಲ್ಪನೆಯ ಬಗ್ಗೆ ತರಬೇತಿ ಮತ್ತು ಅದರ ಅನುಷ್ಠಾನ ಹಾಗೂ ಪಂಚಾಯತು ಮಟ್ಟದಲ್ಲಿ ಮಕ್ಕಳ ರಕ್ಷಣಾ ಸಮಿತಿಯ ರಚನೆ ಮತ್ತು ಅದರ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ತರಬೇತಿ ಆಯೋಜನೆ ಮಾಡುವಲ್ಲಿ ಯಾವೆಲ್ಲಾ ಅಂಶಗಳ ಮೇಲೆ ತರಬೇತಿ ನೀಡಬಹುದು ಎಂಬುದರ ಕುರಿತು ಚರ್ಚಿಸಲು ಮತ್ತು ಅದಕ್ಕೆ ಅನುಕೂಲವಾಗುವಂತೆ ತರಬೇತಿ ಕೈಪಿಡಿ ರಚಿಸಲು ಸಮಾಲೋಚನಾ ಸಭೆಯನ್ನು ದಿನಾಂಕ 06.02.2018ರಂದು ಪಡಿ ಕಛೇರಿಯಲ್ಲಿ ನಡೆಸಲಾಯಿತು. ಈ ತರಬೇತಿ ಕೈಪಿಡಿ ರಚನಾ ಸಭೆಯಲ್ಲಿ ಪಂಚಾಯತು ಅಭಿವೃದ್ಧಿ ಅಧಿಕಾರಿಗಳು, ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ತರಬೇತಿ ನೀಡಿದಂತಹ ಸಂಪನ್ಮೂಲ ವ್ಯಕ್ತಿಗಳು, ಸಾಮಾಜಿಕ ಆಡಿಟಿಂಗ್‌ನಲ್ಲಿ ಅನುಭವವಿರುವ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅನುಭವವಿರುವ ತಜ್ಞರು ಭಾಗವಹಿಸಿದ್ದು ತರಬೇತಿ ಕೈಪಿಡಿಯ ರೂಪುರೇಷೆಗಳನ್ನು ತಯಾರಿಸಲಾಯಿತು.



ಪಂಚಾಯತ್ ತರಬೇತಿ ಕೈಪಿಡಿ ರಚನಾ ಸಭೆ

**13. ಮಗುಸ್ನೇಹಿ ಗ್ರಾಮ ಪಂಚಾಯತು ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ:**

ಮಗುಸ್ನೇಹಿ ಗ್ರಾಮ ಪಂಚಾಯತು ಪರಿಕಲ್ಪನೆಯನ್ನು ಪಂಚಾಯತುಗಳಲ್ಲಿ ಅನುಷ್ಠಾನ ಮಾಡುವಲ್ಲಿ ಮತ್ತು ಮಕ್ಕಳ ರಕ್ಷಣಾ ನೀತಿಯ ಕುರಿತು ಪಂಚಾಯತು ಸದಸ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡುವ ಕುರಿತಂತೆ ಸಂಪನ್ಮೂಲ ವ್ಯಕ್ತಿಗಳಾಗಿ ಮಾಹಿತಿ ನೀಡುವವರಿಗೆ ಪಡಿ ಕಛೇರಿಯಲ್ಲಿ ದಿನಾಂಕ 23.02.2018 ರಂದು ನಡೆಯಿತು.



ಪಂಚಾಯತ್ ತರಬೇತುದಾರರಿಗೆ ತರಬೇತಿ

**ಆ : ಡಿ.ಇಎಲ್.ಇಡಿ ಪಠ್ಯಕ್ರಮದಲ್ಲಿನ ಸುಧಾರಣೆ:**

1. **ಸಮಾಲೋಚನಾ ಸಭೆಗಳು:** ಮಗುಸ್ನೇಹಿ ಅಂಶಗಳ ಅಳವಡಿಕೆಗಾಗಿ ಮತ್ತು ತರಬೇತಿ ಹಂತದಲ್ಲಿ ಮಕ್ಕಳ ಸ್ನೇಹಿ ಶಿಕ್ಷಕರನ್ನು ತಯಾರು ಮಾಡುವಲ್ಲಿ ಶಿಕ್ಷಕ ಶಿಕ್ಷಣ ತರಬೇತಿ ಸಂಸ್ಥೆಯ ಸಹಯೋಗದೊಂದಿಗೆ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಪಠ್ಯಕ್ರಮಗಳಲ್ಲಿ ಕೆಲವೊಂದು ಸಕಾರಾತ್ಮಕ ಬದಲಾವಣೆಗಾಗಿ ಕಾರ್ಯಾಗಾರಗಳು, ತರಬೇತಿ ಕೈಪಿಡಿ, ವಕಾಲತ್ತು ಪ್ರಕ್ರಿಯೆಯನ್ನು ನಡೆಸುತ್ತಾ ಬರುತ್ತಿದೆ ಇದರ ಮುಂದುವರಿದ ಭಾಗವಾಗಿ ಪಡಿಯು ಡಿ.ಇಎಲ್.ಇಡಿ ಕೋರ್ಸ್‌ನ ಪ್ರಸ್ತುತತೆಯ ಬಗ್ಗೆ ಮತ್ತು ಅದರ ಪಠ್ಯಕ್ರಮ ಮತ್ತು



ಡಯಟ್‌ನೊಂದಿಗೆ ಸಮಾಲೋಚನಾ ಸಭೆ

ಕ್ರೀಯಾ ಸಂಶೋಧನೆಗಳಲ್ಲಿ ಹೊಸತನವನ್ನು ಈಗಿನ ಅವಶ್ಯಕತೆಗಳಿಗನುಗುಣವಾಗಿ ತಿಳಿದುಕೊಳ್ಳುವ ಸಲುವಾಗಿ ಮತ್ತು ಮಾನವೀಯ ಮೌಲ್ಯಗಳನ್ನು ಹೇಗೆ ಕಲಿಸಬೇಕು. ಉಡುಪಿ ಮತ್ತು ದ.ಕ ಜಿಲ್ಲೆಯ ಡಯಟ್ ಮತ್ತು ಡಿ.ಇಎಲ್.ಇಡಿ ಸಂಸ್ಥೆಗಳೊಂದಿಗೆ ಸಮಾಲೋಚನಾ ಸಭೆಯನ್ನು ದಿನಾಂಕ 18.09.2017ರಂದು ಮಂಗಳೂರು ಡಯಟ್‌ನಲ್ಲಿ ನಡೆಸಲಾಯಿತು.

2. **ಡಯಟ್‌ನೊಂದಿಗೆ ಮತ್ತು ಡಿ.ಇಎಲ್.ಇಡಿ ಸಂಸ್ಥೆಯ ಮುಖ್ಯಸ್ಥರೊಂದಿಗೆ ಡಿ.ಇಎಲ್.ಇಡಿ ಪಠ್ಯಕ್ರಮ ಮತ್ತು ಕೋರ್ಸ್‌ನ ಕುರಿತಂತೆ ವಿಮರ್ಶೆ:** ಉಡುಪಿ ಮತ್ತು ದ.ಕ ಜಿಲ್ಲೆಯ ಡಿ.ಇಎಲ್.ಇಡಿ ಸಂಸ್ಥೆಯ ಮುಖ್ಯಸ್ಥರೊಂದಿಗೆ ಪ್ರಸ್ತುತ ಕೋರ್ಸ್‌ನ ಕುರಿತು ವಿಮರ್ಶೆಯನ್ನು ದಿನಾಂಕ 19.01.2018 ರಂದು ಮಂಗಳೂರು ಡಯಟ್‌ನಲ್ಲಿ ನಡೆಸಲಾಯಿತು. ಅಲ್ಲದೆ ಕೋರ್ಸ್‌ನ ಕುರಿತಂತೆ ವಸ್ತು ಸ್ಥಿತಿಯ ಅಧ್ಯಯನವನ್ನು ನಡೆಸುವ ಕುರಿತಂತೆ ತೀರ್ಮಾನಿಸಲಾಯಿತು. ವಿದ್ಯಾರ್ಥಿಗಳಿಂದ ಉಪನ್ಯಾಸಕರಿಂದ ಮತ್ತು ಸಂಸ್ಥೆಯ ಮುಖ್ಯಸ್ಥರಿಂದ ತರಬೇತಿಯ ಪ್ರಶ್ನಾವಳಿಯ ಮೂಲಕ ಅಭಿಪ್ರಾಯ ಸಂಗ್ರಹ ಮಾಡುವುದರೊಂದಿಗೆ ವಸ್ತು ಸ್ಥಿತಿ ಮತ್ತು ಈಗಿನ ಅವಶ್ಯಕತೆಗಳ ಬಗ್ಗೆ ತಿಳಿದುಕೊಳ್ಳುವುದು ಮತ್ತು ಪ್ರವೇಶಿಕೆಯ ಕುರಿತಂತೆ ಈಗಾಗಲೇ ತಯಾರಿಸಿದ ಮಾದರಿ ಕೈಪಿಡಿಯ ರೂಪುರೇಷೆಗಳ ಬಗ್ಗೆ ಚರ್ಚಿಸಲಾಯಿತು.

3. **ವಾಸ್ತವ ಸ್ಥಿತಿಯ ಅಧ್ಯಯನ:** ಉಡುಪಿ ಮತ್ತು ದ.ಕ ಜಿಲ್ಲೆಯ ಡಿ.ಇಎಲ್.ಇಡಿ ಸಂಸ್ಥೆಯ ವಿದ್ಯಾರ್ಥಿಗಳಿಂದ ಹಿರಿಯ ಉಪನ್ಯಾಸಕರು ಮತ್ತು ಸಂಸ್ಥೆಯ ಮುಖ್ಯಸ್ಥರಿಂದ ಪ್ರಶ್ನಾವಳಿಯ ಮೂಲಕ ವಾಸ್ತವ ಸ್ಥಿತಿಯ ಬಗ್ಗೆ ಮತ್ತು ಯಾವೆಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆ ಹಾಗೂ ತರಬೇತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವಲ್ಲಿ ಉತ್ತಮ ಶಿಕ್ಷಕರನ್ನು ರೂಪಿಸುವಲ್ಲಿನ ಅಗತ್ಯತೆಗಳ ಬಗ್ಗೆ ಉಡುಪಿ ಮತ್ತು ದ.ಕ ಜಿಲ್ಲೆಯ 7 ಸಂಸ್ಥೆಗಳ ಸುಮಾರು 152 ವಿದ್ಯಾರ್ಥಿಗಳಿಂದ ಮತ್ತು 40 ಉಪನ್ಯಾಸಕರಿಂದ ಮಾಹಿತಿಯನ್ನು ಕಲೆಹಾಕಲಾಯಿತು.

4. **ವರದಿ ಮಂಡನೆ:** ಕಲೆ ಹಾಕಿದ ಮಾಹಿತಿಯನ್ನು ಕ್ರೋಢೀಕರಿಸಿ ವಿಶ್ಲೇಷಿಸಿ ವರದಿಯನ್ನು ತಯಾರಿಸಿ ಡಯಟ್ ಮತ್ತು ಡಿ.ಇಎಲ್.ಇಡಿ ಮುಖ್ಯಸ್ಥರೊಂದಿಗೆ ವರದಿಯ ಮಂಡನೆ ಮತ್ತು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ಸಮಾಲೋಚನಾ ಸಭೆಯನ್ನು ದಿನಾಂಕ. 01.03.2018 ರಂದು ಡಯಟ್ ಮಂಗಳೂರಿನಲ್ಲಿ ಆಯೋಜಿಸಲಾಯಿತು. ಪ್ರಮುಖವಾಗಿ ವರದಿಯಲ್ಲಿ ಕಂಡುಕೊಂಡ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಅದರಲ್ಲೂ ಪ್ರಮುಖವಾಗಿ ಪ್ರಶಿಕ್ಷಣಾರ್ಥಿಗಳ ಆರಂಭಿಕ ಕಾರ್ಯಾಗಾರ, ಡಿ.ಇಎಲ್.ಇಡಿ ಶಿಕ್ಷಣದಲ್ಲಿ ಕ್ರೀಯಾ ಸಂಶೋಧನೆ ಮತ್ತು ಶಾಲಾ ಕ್ಷೇತ್ರ ಭೇಟಿ ಸಂದರ್ಭದಲ್ಲಿ ಮಾರ್ಗದರ್ಶನ ಮುಂತಾದ ವಿಚಾರಗಳ ಕುರಿತಂತೆ ಕಂಡುಕೊಂಡ ಅಂಶಗಳಲ್ಲಿ ಕಾರ್ಯ ಯೋಜನೆಯನ್ನು ರೂಪಿಸುವಂತೆ ನಿರ್ಣಯಿಸಲಾಯಿತು.



ವಾಸ್ತವ ಸ್ಥಿತಿಯ ಅಧ್ಯಯನದ ವರದಿ ಮಂಡನೆ ಮತ್ತು ಚರ್ಚೆ

5. **ಪ್ರವೇಶಿಕೆ ಕೈಪಿಡಿಯ ಪ್ರಾಯೋಗಿಕ ಅನುಷ್ಠಾನ:** ಡಯಟ್‌ನ ಸಹಯೋಗದೊಂದಿಗೆ ಪ್ರಥಮ ಮತ್ತು ದ್ವಿತಿಯ ವರ್ಷದ ವಿದ್ಯಾರ್ಥಿಗಳಿಗೆ ತರಬೇತಿ ಕೈಪಿಡಿಯ ಆಧಾರದಲ್ಲಿ ಪ್ರಾಯೋಗಿಕವಾಗಿ ತರಬೇತಿಯನ್ನು 3 ದಿನಗಳ ಕಾಲ ಡಯಟ್ ಮಂಗಳೂರಿನಲ್ಲಿ ಮಾರ್ಚ್ ತಿಂಗಳಿನ ತಾರೀಕು 5 ರಿಂದ 7 ರವರೆಗೆ ಅಯೋಜಿಸಲಾಯಿತು. ಪ್ರವೇಶಿಕೆಯ ಅಧಿವೇಶನದಲ್ಲಿ ವಿದ್ಯಾರ್ಥಿಗಳಿಗೆ ಈ ಕೋರ್ಸ್‌ನ ಮಹತ್ವ, ವಿವಿಧ ಹಿನ್ನಲೆಗಳಿಂದ ಬಂದಂತಹ ವಿದ್ಯಾರ್ಥಿಗಳನ್ನು ಈ ತರಬೇತಿಗೆ

ಹೊಂದಿಕೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡುವಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ತರಬೇತಿಯ ಕುರಿತಂತೆ ಆಶಾಭಾವನೆಯನ್ನು ಮೂಡಿಸುವಲ್ಲಿ ಈ ಪ್ರವೇಶಿಕೆ ತರಬೇತಿಯು ಸಹಕಾರಿಯಾಯಿತು. ದ.ಕ ಜಿಲ್ಲೆಯ ಡಿ.ಇಎಲ್.ಇಡಿ ಸಂಸ್ಥೆಯ ಉಪನ್ಯಾಸಕರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು. ಮಕ್ಕಳು ಮುಖ್ಯವಾಗಿ ಸಂವಹನ, ನಾಯಕತ್ವ, ಆದರ್ಶಶಿಕ್ಷಕರು, ಶಿಕ್ಷಕರ ಕರ್ತವ್ಯ ಮತ್ತು ಜವಾಬ್ದಾರಿಗಳು, ನೈತಿಕ ಮೌಲ್ಯಗಳು, ಶಿಕ್ಷಕ ಶಿಕ್ಷಣ ತರಬೇತಿಯ ಅವಕಾಶಗಳು ಮೊದಲಾದ ವಿಷಯಗಳ ಕುರಿತು ಮೂರು ದಿನಗಳಲ್ಲಿ ಚಟುವಟಿಕೆಯಾಧಾರಿತವಾಗಿ ಅಧಿವೇಶನ ನಡೆಯಿತು. ವಿದ್ಯಾರ್ಥಿಗಳು ಪ್ರವೇಶಿಕೆ ತರಬೇತಿಯ ಪ್ರಾಯೋಗಿಕ ಅನುಷ್ಠಾನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.



ಡಿ.ಇಎಲ್.ಇಡಿ. ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ

**ಇ.ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಕಾಲತ್ತು**

**1 ಸಮಾಲೋಚನಾ ಸಭೆಗಳು:**

ಪಾಫ್ರೆಯ ಜೊತೆ ಕೈಜೊಡಿಸಿರುವ ಸಂಸ್ಥೆಗಳು ಮತ್ತು ಸಂಘಟನೆಗಳ ಜೊತೆಗೆ ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮುಂದಿನ ಯೊಜನೆಗಳ ಕುರಿತು ಚರ್ಚಿಸುವ ಸಲುವಾಗಿ ಮತ್ತು ಕಳೆದ ಭಾರಿ ಪಾಫ್ರೆಯ ಸಂಘಟನೆಗಳು ಶಿಕ್ಷಣ ಹಕ್ಕು ಕಾಯಿದೆಯಲ್ಲಿ ಉಲ್ಲೇಖಿಸಿರುವಂತೆ ಶಾಲೆಗಳಲ್ಲಿ ಇರಬೇಕಾದ ಸೌಲಭ್ಯಗಳ ಬಗ್ಗೆ **ಶಿಕ್ಷಣ ಹಕ್ಕು ಕಾಯಿದೆ ಜಾರಿ ಸ್ಥಿತಿ–ಗತಿ ಸಮೀಕ್ಷೆ**ಯನ್ನು ಕರ್ನಾಟಕದ 23 ಜಿಲ್ಲೆಗಳಲ್ಲಿ ನಡೆಸಿ ವರದಿಯನ್ನು ತಯಾರಿಸಲಾಗಿದ್ದು, ಅದರ ವರದಿಯನ್ನು ದಿನಾಂಕ 31.01.2018 ರಂದು ಬೆಂಗಳೂರಿನ ಎಸ್.ಸಿ.ಎಮ್ ಹೌಸ್‌ನಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಮಗು ಮತ್ತು ಕಾನೂನು ಕೇಂದ್ರದ ಡಾ। ನಿರಂಜನಾರಾಧ್ಯರವರು ಸಭೆಯಲ್ಲಿ ಮಂಡಿಸಿದರು. ವರದಿಯಲ್ಲಿ ಕಂಡುಕೊಂಡ ಅಂಶಗಳ ಈಡೇರಿಕೆಗಾಗಿ ವಕಾಲತ್ತನ್ನು ಮಾಡುವ ಕುರಿತಂತೆ ತೀರ್ಮಾನಿಸಲಾಯಿತು. ಕರ್ನಾಟಕದ ಶೈಕ್ಷಣಿಕ 4 ವಿಭಾಗದಲ್ಲಿ ಪಾಫ್ರೆಯ ಪ್ರವರ್ತಕರು (ಪ್ರೋಮೊಟರ್ಸ್) ಕೆಲವೊಂದು ಶಾಲೆಗಳನ್ನು ಆಯ್ಕೆ ಮಾಡಿ ಅಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕಾರ್ಯನಿರ್ವಹಿಸುವ ಕುರಿತು ತೀರ್ಮಾನಿಸಲಾಯಿತು.



ಶಿಕ್ಷಣ ಹಕ್ಕು ಕಾಯಿದೆ ಜಾರಿ ಸ್ಥಿತಿಗತಿ ವರದಿ ಮಂಡನೆ

**2.ಪಾಫ್ರೆಯ ಪ್ರವರ್ತಕರಿಗೆ ತರಬೇತಿ:**

ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪಾಫ್ರೆಯ ಪ್ರವರ್ತಕರಿಗೆ ತರಬೇತಿ ಕಾರ್ಯಕ್ರಮವನ್ನು ದಿನಾಂಕ 27.03.2018ರಂದು ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ 28.03.2018ರಂದು ಆಯೋಜಿಸಲಾಯಿತು. ತರಬೇತಿಯಲ್ಲಿ ಪ್ರವರ್ತಕರಿಗೆ ತಮ್ಮ ವ್ಯಾಪ್ತಿಯ ಶಾಲೆಯಲ್ಲಿ ಎಸ್.ಡಿ.ಎಮ್.ಸಿ ಇವರಿಗೆ ತರಬೇತಿ ನೀಡುವುದರ ಜೊತೆಗೆ ಆ ಶಾಲೆಯಲ್ಲಿ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ಉಲ್ಲೇಖಿಸಿರುವ ಅಂಶಗಳ ಅನುಷ್ಠಾನಕ್ಕಾಗಿ ವಕಾಲತ್ತು ಪ್ರಕ್ರಿಯೆಯನ್ನು ಹೇಗೆ ನಡೆಸುವುದು ಎಂಬುದರ ಬಗ್ಗೆ ತರಬೇತಿಯನ್ನು ನೀಡಲಾಯಿತು. ಅಲ್ಲದೇ ಆ ಶಾಲೆಗಳಲ್ಲಿ ವಸ್ತು ಸ್ಥಿತಿ ಅಧ್ಯಯನ ನಡೆಸಲು ಮತ್ತು ಮಾಹಿತಿ ಕಲೆ ಹಾಕುವ ನಮೂನೆಯ ಬಗ್ಗೆ ತರಬೇತಿಯನ್ನು ಉಡುಪಿಯಲ್ಲಿ ಪಡಿಯ ನಿರ್ದೇಶಕರಾದ ರೆನ್ನಿ ಡಿ'ಸೋಜ ಮತ್ತು ತರಬೇತಿ ಸಂಯೋಜಕರಾದ ಕಸ್ತೂರಿಯವರು ಹಾಗೂ ದ.ಕ ಜಿಲ್ಲೆಯಲ್ಲಿ ಅನ್ನಾ ಫೆರ್ನಾಂಡಿಸ್ ಮತ್ತು ಕಸ್ತೂರಿಯವರು ನೀಡಿದರು.



ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿ ಆರ್‌ಟಿಇ ಪ್ರವರ್ತಕರಿಗೆ ತರಬೇತಿ

### ಈ. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಮತ್ತು ಅದರ ಘಟಕಗಳಿಗೆ ತರಬೇತಿ:

1. **ಎಮ್.ಓ.ಯು.** ಪಡಿ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಮತ್ತು ಅದರ ಘಟಕಗಳೊಂದಿಗೆ ಯೋಜನಾ ಚಟುವಟಿಕೆಗಳ ಕುರಿತಂತೆ ಮತ್ತು ಆಡಳಿತಾತ್ಮಕ ವ್ಯವಹಾರಗಳ ನಡುವಿನ ಪಾತ್ರಗಳ ಬಗೆಗಿನ ಸ್ಪಷ್ಟತೆಗಾಗಿ ಒಪ್ಪಂದವನ್ನು ನಡೆಸಲು ಸಮಾಲೋಚನಾ ಸಭೆಯನ್ನು ನಡೆಸಿ ಚರ್ಚಿಸಿ ಅಂತಿಮಗೊಳಿಸಲಾಯಿತು. ಅಲ್ಲದೆ ಒಪ್ಪಂದದ ಕರಾರಿಗೆ ಬದ್ಧರಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಸಹಿಯನ್ನು ಹಾಕಲಾಯಿತು.



ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟದೊಂದಿಗೆ ಸಮಾಲೋಚನೆ

2. **ಸ್ವ–ಮೌಲ್ಯಮಾಪನ** : ಶಿಕ್ಷಣ ಸಂಪನ್ಮೂಲ ಕೇಂದ್ರ ಮತ್ತು ಅದರ ಘಟಕಗಳ ಕಾರ್ಯವೈಖರಿಯ ಬಗ್ಗೆ ಸ್ವ–ಮೌಲ್ಯಮಾಪನವನ್ನು ಅಭಿವೃದ್ಧಿಪಡಿಸಿದ ಸೂಚ್ಯಂಕಗಳ ಆಧಾರದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಪದಾಧಿಕಾರಿಗಳು ನಡೆಸಿದರು. ಸ್ವ–ಮೌಲ್ಯಮಾಪನದ ಆಧಾರದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಪ್ರಸ್ತುತ ಸ್ಥಿತಿಗತಿಗಳು ಹೇಗಿವೆ ಎಂಬುದರ ಅರಿವು ಮತ್ತು ಅದು ಸುಸ್ಥಿರ ಅಭಿವೃದ್ಧಿಯಾಗಬೇಕಾದರೆ ಕೈಗೊಳ್ಳಬೇಕಾದ ಕಾರ್ಯತಂತ್ರಗಳನ್ನು ಒಳಗೊಂಡ ಕಾರ್ಯಯೋಜನೆಯನ್ನು ರೂಪಿಸಲಾಯಿತು.

**3. ಸಾಮಾರ್ಥ್ಯ ಅಭಿವೃದ್ಧಿ ತರಬೇತಿ:**

ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಮತ್ತು ಅದರ 8 ಘಟಕಗಳಿಗೆ ವಿವಿಧ ವಿಷಯಗಳ ಮೇಲೆ ತರಬೇತಿಯನ್ನು ಆಯೋಜಿಸಲಾಯಿತು. ಅಕ್ಟೋಬರ್ ತಿಂಗಳಲ್ಲಿ ಆಡಳಿತಾತ್ಮಕ, ದಾಖಲೀಕರಣ, ವಕಾಲತ್ತು ವಿಷಯಗಳಲ್ಲಿ ಮತ್ತು ಜನವರಿ ತಿಂಗಳಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೇಲ್ವಿಚಾರಣೆಗಳ ಮೇಲೆ ತರಬೇತಿಯನ್ನು ನೀಡಲಾಯಿತು.



ಶಿಕ್ಷಣ ಸಂಪನ್ಮೂಲ ಕೇಂದ್ರಗಳಿಗೆ ಸಾಮರ್ಥ್ಯ ವರ್ಧನ ತರಬೇತಿ

**4.ವಕಾಲತ್ತು ಪ್ರಕ್ರಿಯೆ:**

ಉಡುಪಿ ಮತ್ತು ದ.ಕ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆ, ಪಂಚಾಯತ್ ರಾಜ್ ಇಲಾಖೆ ಮತ್ತು ಆರೋಗ್ಯ ಇಲಾಖೆಗಳೊಂದಿಗೆ ಮಗುಸ್ನೇಹಿ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಇಲಾಖಾ ಸಹಕಾರ ಕೋರುವ ಕುರಿತು ಜಿಲ್ಲಾ ಪಂಚಾಯತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ, ಶಿಕ್ಷಣ ಇಲಾಖೆಯ ಉಪನಿರ್ದೇಶಕರೊಂದಿಗೆ, ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದೊಂದಿಗೆ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಮಗುಸ್ನೇಹಿ ಶಾಲೆ, ಮಗುಸ್ನೇಹಿ ಪಂಚಾಯತು ಮತ್ತು ಮಕ್ಕಳ ರಕ್ಷಣಾ ಸಮಿತಿಯ ಪರಿಕಲ್ಪನೆಯ ಅನುಷ್ಠಾನಕ್ಕಾಗಿ ಇಲಾಖಾ ಸಹಕಾರ ಮತ್ತು ಅನುಮತಿ ಬಯಸುವ ನಿಟ್ಟಿನಲ್ಲಿ ವಕಾಲತ್ತು ಪ್ರಕ್ರಿಯೆಯನ್ನು ನಡೆಸಲಾಯಿತು.



ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯೊಂದಿಗೆ ವಕಾಲತ್ತು

**5. ಮನೆಕೆಲಸ (ಹೋಂ ವರ್ಕ್) ಅಧ್ಯಯನದ ವರದಿ ಮಂಡನೆ:**

ಶಾಲೆಗಳಲ್ಲಿ ನೀಡುವ ಮನೆಕೆಲಸದ ಕುರಿತು ಡಾ. ಸುಕುಮಾರ ಗೌಡರ ನೇತೃತ್ವದಲ್ಲಿ ನಡೆಸಿದ ಅಧ್ಯಯನ ವರದಿಯ ಮಂಡನೆಯನ್ನು ದಿನಾಂಕ 04.01.2018ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ದ.ಕ ಜಿಲ್ಲೆಯ ಉಪನಿರ್ದೇಶಕರ ಕಛೇರಿಯಲ್ಲಿ ನಡೆಸಲಾಯಿತು. ಸಭೆಯಲ್ಲಿ ಡಾ. ಎನ್ ಸುಕುಮಾರ್ ಗೌಡ ಇವರು ವರದಿಯನ್ನು ಮಂಡಿಸಿದರು ಮತ್ತು ಪಡಿಯ ನಿರ್ದೇಶಕರಾದ ರೆನ್ನಿ ಡಿ'ಸೋಜ ರವರು ಅಧ್ಯಯನದ ಮಹತ್ವದ ಕುರಿತು ವಿವರಿಸಿದರು. ಮಕ್ಕಳಿಗೆ ಮನೆಕೆಲಸ ಹೊರೆಯಾಗದ



ಹೋಂವರ್ಕ್ ಅಧ್ಯಯನದ ವರದಿ ಮಂಡನೆ ಮತ್ತು ಚರ್ಚೆ

ರೀತಿಯಲ್ಲಿ ಹೇಗೆ ನೀಡಬಹುದು ಎಂಬುದರ ಬಗ್ಗೆ ಪ್ರಾಯೋಗಿಕ ನೆಲೆಯಲ್ಲಿ ಆಯ್ದ ಶಾಲೆಯಲ್ಲಿ ಕಾರ್ಯತಂತ್ರವನ್ನು ರೂಪಿಸುವುದರ ಕುರಿತು ಚರ್ಚಿಸಲಾಯಿತು. ದ.ಕ ಜಿಲ್ಲೆಯ 7 ಶೈಕ್ಷಣಿಕ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

**6. ಸಿಬ್ಬಂದಿ ತರಬೇತಿ /ಕೌಶಲ್ಯ ಅಭಿವೃದ್ಧಿ ತರಬೇತಿ:**

ಪಡಿ ಸಂಸ್ಥೆಯ ಸಿಬ್ಬಂದಿಗಳಿಗೆ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ದಿನಾಂಕ 11 ಸೆಪ್ಟಂಬರ್‌ನಿಂದ 13 ಸೆಪ್ಟಂಬರ್‌ವರೆಗೆ ಜನತಾ ಕೇಂದ್ರ ಬೋಳಾರದಲ್ಲಿ ಮೂರು ದಿನಗಳವರೆಗೆ ಕಿಶೋರ್ ಅತ್ತಾವರ ನೇತೃತ್ವದಲ್ಲಿ ತರಬೇತಿ ಹಾಗೂ ಪಡಿ ಸಂಸ್ಥೆಯಲ್ಲಿ ಮಾರ್ಚ್ ತಿಂಗಳ 17 ಮತ್ತು 18 ರಂದು ನಡೆಯಿತು. ಮುಖ್ಯವಾಗಿ ಮಗುಸ್ನೇಹಿ ಪರಿಕಲ್ಪನೆಯ ಬಗ್ಗೆ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತಾಗಲು ಅವಶ್ಯವಿರುವ ಕೌಶಲ್ಯಗಳ ಬಗ್ಗೆ ತರಬೇತಿ ನೀಡಲಾಯಿತು.



ಸಿಬ್ಬಂದಿ ಕೌಶಲ್ಯ ಅಭಿವೃದ್ಧಿ ತರಬೇತಿ

**7. ಓ.ಐ.ಓ.(Output & Impact Orientation) ತರಬೇತಿ:**

ಫಲಿತಾಂಶಾಧಾರಿತ ಚಟುವಟಿಕೆಯನ್ನು ಹೇಗೆ ಅನುಷ್ಠಾನ ಮಾಡಬಹುದು ಎಂಬುದರ ಬಗ್ಗೆ ಮಾರ್ಚ್ ತಿಂಗಳ 15 ಮತ್ತು 16 ರಂದು 2 ದಿನಗಳವರೆಗೆ ತರಬೇತಿಯನ್ನು ಕಿಲೇಶ್ ಚತುರ್ವೇದಿಯವರು ನೀಡಿದರು. ಈ ತರಬೇತಿಯಲ್ಲಿ ಪಡಿ ಸಂಸ್ಥೆಗೆ ಮಾರ್ಗದರ್ಶಕರಾಗಿರುವ ಆತ್ಮ ಸಂಸ್ಥೆಯ ಆ್ಯನಿ ಜಯರಾಜರವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ ಮಗು ಸ್ನೇಹಿ ಶಾಲೆ, ಮಗುಸ್ನೇಹಿ ಪಂಚಾಯತು ಮತ್ತು ಮಕ್ಕಳ ರಕ್ಷಣಾ ಸಮಿತಿಯ ಬಗ್ಗೆ ಕ್ಷೇತ್ರ ಭೇಟಿ ಮಾಡಿ ಪ್ರಗತಿ ಪರಿಶೀಲನೆಯೊಂದಿಗಿನ ಚರ್ಚೆಯನ್ನು ಅವಲೋಕಿಸಿದರು. ತರಬೇತಿಯಲ್ಲಿ ಸೂಚ್ಯಂಕಗಳು ಮತ್ತು ಸ್ವ ಮೌಲ್ಯಮಾಪನದ ಕುರಿತು ತರಬೇತಿಯನ್ನು ನೀಡಿದರು.




ಸಿಬ್ಬಂದಿ ತರಬೇತಿ

**8. ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯದ ಕುರಿತು ಅರಿವು ಕಾರ್ಯಕ್ರಮ**

ದಿನಾಂಕ 12.2.2018ರಂದು ಸ.ಹಿ.ಪ್ರಾ. ಶಾಲೆ ಕೆದ್ದಳಿಕೆಯಲ್ಲಿ ಪಡಿ ಮತ್ತು ಲಕ್ಷ್ಮೀ ಮೆಮೋರಿಯಲ್ ಕಾಲೇಜ್ ಆಫ್ ನರ್ಸಿಂಗ್ ಇವರ ಜಂಟಿ ಆಶ್ರಯದಲ್ಲಿ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯದ ಕುರಿತು ಅರಿವು ಕಾರ್ಯಕ್ರಮವನ್ನು ಶಾಲೆಯ ಮಕ್ಕಳಿಗೆ ಹಮ್ಮಿಕೊಳ್ಳಲಾಯಿತು. ಹದಿಹರೆಯ ಸಂದರ್ಭಗಳಲ್ಲಿ ಮಕ್ಕಳಲ್ಲಿ ಉಂಟಾಗುವ ಬದಲಾವಣೆಗಳ ಕುರಿತಂತೆ ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ನೀಡಿದರು.



ಸ.ಹಿ.ಪ್ರಾ.ಶಾಲೆ ಕೆದ್ದಳಿಕೆಯಲ್ಲಿ ಅರಿವು ಕಾರ್ಯಕ್ರಮ

**9. ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳಿಗೆ ಕ್ಷೇತ್ರ ಅಧ್ಯಯನದ ಕುರಿತಂತೆ ಕಾರ್ಯಾಗಾರ :** ಪಡಿ ಸಂಸ್ಥೆಗೆ ಕ್ಷೇತ್ರ ಕಾರ್ಯಕ್ಕೆ ನಿಯೋಜನೆಗೊಂಡ ಮಂಗಳೂರು ಮತ್ತು ಉಡುಪಿ ಜಿಲ್ಲೆಯ ಸಮಾಜ ಕಾರ್ಯ ಕಾಲೇಜಿನ ವಿದ್ಯಾರ್ಥಿಗಳಿಗೆ ಕ್ಷೇತ್ರ ಕಾರ್ಯದಲ್ಲಿನ ಪ್ರಾಯೋಗಿಕ ಅನುಭವಕ್ಕಾಗಿ ಯೋಜನೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮಾರ್ಗದರ್ಶನದ ಮೂಲಕ ತರಬೇತಿಯನ್ನು ನೀಡುತ್ತಾ ಬರುತ್ತಿದೆ. 2017–18ರಲ್ಲಿ ಕ್ಷೇತ್ರ ಕಾರ್ಯಕ್ಕಾಗಿ ಬಂದಂತಹ ವಿದ್ಯಾರ್ಥಿಗಳಿಗೆ ಸಂಸ್ಥೆಯ ಬಗ್ಗೆ ಮತ್ತು ಕ್ಷೇತ್ರ ಕಾರ್ಯದ ಕುರಿತಂತೆ ಓರಿಯೆಂಟೇಶನ್ ಕಾರ್ಯಾಗಾರವನ್ನು ದಿನಾಂಕ 27.8.2017ರಂದು ನಡೆಯಿತು. ಈ ಕಾರ್ಯಾಗಾರದಲ್ಲಿ 2016–17ನೇ ಸಾಲಿನಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಹಾಗೂ ಸಮಾಜ ಕಾರ್ಯದಲ್ಲಿ ಕ್ಷೇತ್ರ ಅಧ್ಯಯನದ ಪಾತ್ರ ಎಂಬುವುದರ ಕುರಿತು ಮಣಿಪಾಲ ವಿಶ್ವವಿದ್ಯಾನಿಲಯದ ಪೂರ್ಣಿಮಾ ವೆಂಕಟ್‌ರವರು ಉಪನ್ಯಾಸ ನೀಡಿದರು.




ಸಮಾಜ ಕಾರ್ಯ ವಿದ್ಯಾರ್ಥಿಗಳಿಗೆ ಓರಿಯೆಂಟೇಶನ್ ತರಬೇತಿ

## ಉ. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಮತ್ತು ಅದರ ಘಟಕಗಳ ಪ್ರಮುಖ ಚಟುವಟಿಕೆಗಳು:

1. **ಮಕ್ಕಳ ಸಂಸತ್ತು:**

ದ.ಕ ಮತ್ತು ಉಡುಪಿ ಜಿಲ್ಲೆಯ ಮಂಗಳೂರು, ಪುತ್ತೂರು, ಬೆಳ್ತಂಗಡಿ, ಸುಳ್ಯ, ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲೂಕಿನಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಒಂದೊಂದು ಕಾರ್ಯಕ್ರಮಗಳು ನಡೆದು ಸುಮಾರು 800 ಮಕ್ಕಳು ಮಕ್ಕಳ ಸಂಸತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ಆಯಾಯ ತಾಲೂಕಿನ ಶಾಸಕರ ಜೊತೆ ಮಕ್ಕಳು ನೇರವಾಗಿ ಸಂವಾದ ನಡೆಸಿ ತಮ್ಮ ಬೇಡಿಕೆಗಳನ್ನು ಶಾಸಕರ ಮುಂದೆ ಇಟ್ಟು ಬಗೆಹರಿಸುವಂತೆ ವಿನಂತಿಸಿಕೊಂಡರು. ಮಕ್ಕಳ ಬೇಡಿಕೆಗಳಲ್ಲಿ ಶಾಲಾ ಮೂಲಭೂತ ಸೌಕರ್ಯ, ಮಕ್ಕಳ ರಕ್ಷಣೆಗೆ ಪೂರಕವಾದ ವ್ಯವಸ್ಥೆಗಳ ಅನುಷ್ಠಾನ, ಶಿಕ್ಷಕರ ಕೊರತೆ, ಗುಣಾತ್ಮಕ ಶಿಕ್ಷಣದಲ್ಲಿನ ಕೊರತೆ ಇತ್ಯಾದಿ ಪ್ರಮುಖ ವಿಚಾರಗಳ ಕುರಿತಂತೆ ಚರ್ಚೆ ನಡೆದು ಕೆಲವೊಂದು ಅಂಶಗಳನ್ನು ತಕ್ಷಣದಲ್ಲಿ ಪರಿಹಾರ ಕಂಡುಕೊಳ್ಳುವಲ್ಲಿ ಶಾಸಕರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಮಕ್ಕಳ ಈ ಬೇಡಿಕೆಯನ್ನು ಕ್ರೋಢೀಕರಿಸಿ ಅನುಷ್ಠಾನ ಮಾಡುವಲ್ಲಿ ಮುಂದಿನ ದಿನಗಳಲ್ಲಿ ಪ್ರಯತ್ನಿಸುವುದಾಗಿ ಭರವಸೆಯನ್ನು ನೀಡಿದರು.




ಮಕ್ಕಳ ಸಂಸತ್ತು ಕಾರ್ಯಕ್ರಮ

2. **ಮಕ್ಕಳ ಮಾಸೋತ್ಸವ:** ಮಕ್ಕಳ ದಿನಾಚರಣೆಯ ಅಂಗವಾಗಿ ಮಕ್ಕಳ ಮಾಸೋತ್ಸವ ಕಾರ್ಯಕ್ರಮವನ್ನು ನವೆಂಬರ್ ತಿಂಗಳಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಯಾದ್ಯಂತ ಕಾರ್ಯಕ್ರಮ ನಡೆಯಿತು. ಪ್ರಮುಖವಾಗಿ ಮಕ್ಕಳ ಚಾರ್ಟರ್ ರಚನೆ ಮತ್ತು ನಾಗರಿಕ ಸನ್ನದಿನಂತೆ ಮಕ್ಕಳ ಸನ್ನದನ್ನು ಕೂಡಾ ರಚನೆ ಮಾಡಿ ವೆಬ್‌ಸೈಟ್‌ನಲ್ಲಿ ಅಳವಡಿಸುವಂತೆ ಜಿಲ್ಲಾಧಿಕಾರಿಗೆ ಮನವಿ, ಮಕ್ಕಳ ಸುರಕ್ಷಾ ನೀತಿಯನ್ನು ಎಲ್ಲಾ ಶೈಕ್ಷಣಿಕ ಸಂಸ್ಥೆ ಮತ್ತು ಪಂಚಾಯತುಗಳಲ್ಲಿ ಅನುಷ್ಠಾನಗೊಳಿಸುವಂತೆ ಮನವಿಯನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ದ.ಕ ಜಿಲ್ಲೆಯಲ್ಲಿ ಮನವಿಯನ್ನು ನೀಡಲಾಗಿದ್ದು ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕತೆ, ಶಿಕ್ಷಾ ರಹಿತ ಶಿಕ್ಷಣ, ಪೊಲೀಸರೊಂದಿಗೆ ಸಂವಾದ, ಪೋಕ್ಸೋ, ಪೋಷಕತ್ವ, ಸುಸ್ಥಿರ ಅಭಿವೃದ್ಧಿ ಗುರಿ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಅರಿವು, ಮಕ್ಕಳ ಹಕ್ಕುಗಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ತಳಮಟ್ಟದಲ್ಲಿ ಮಾಹಿತಿ




ಮಕ್ಕಳ ಮಾಸೋತ್ಸವ ಕಾರ್ಯಕ್ರಮ

ಅರಿವು ಕಾರ್ಯಕ್ರಮ ನೀಡಲಾಯಿತು. ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ 36 ಕಾರ್ಯಕ್ರಮಗಳನ್ನು ಜಿಲ್ಲಾವಾರು ನಡೆಸಿ ಈ ಕಾರ್ಯಕ್ರಮದಲ್ಲಿ ಎಸ್.ಡಿ.ಎಮ್.ಸಿ ಸದಸ್ಯರು, ಪೋಷಕರು, ಶಿಕ್ಷಣಾಸಕ್ತರು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಮಾಧ್ಯಮಾ ಮಿತ್ರರು, ಶಿಕ್ಷಕರು, ಮಕ್ಕಳು, ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಹೀಗೆ ಸುಮಾರು 2000 ಜನರನ್ನು ಸಂಪರ್ಕಿಸಲಾಗಿ ಮಕ್ಕಳ ಹಕ್ಕು ಮತ್ತು ಶಿಕ್ಷಣದ ಬಗ್ಗೆ ಜನಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು.

3. **ಸರಕಾರಿ ಶಾಲೆ ಉಳಿಸಿ ವರದಿ ಮಂಡನೆ:**

ಸರಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್. ಜಿ. ಸಿದ್ಧರಾಮಯ್ಯನವರು ಸರಕಾರಕ್ಕೆ ಮಂಡಿಸಿದ ವರದಿಯನ್ನು ಅನುಷ್ಠಾನ ಮಾಡುವ ಕುರಿತಂತೆ ಸಮಾಲೋಚನಾ ಸಭೆಯನ್ನು ದಿನಾಂಕ 29.07.2018 ರಂದು ಹಂಪನಕಟ್ಟೆಯ ವಿಶ್ವವಿದ್ಯಾನಿಲಯ ಕಾಲೇಜಿನ ಸಭಾಂಗಣದಲ್ಲಿ ಕಾಲೇಜಿನ ಕನ್ನಡ ಸಂಘದ ಸಹಭಾಗಿತ್ವದಲ್ಲಿ ನಡೆಯಿತು. ಸಭೆಯಲ್ಲಿ ರೆನ್ನಿ ಡಿ'ಸೋಜರವರು ಪ್ರಾಸ್ತಾವಿಕ ಮಾತುಗಳನ್ನಾಡಿದರು, ಕೆಜಿವಿಸ್‌ನ ಕಾರ್ಯದರ್ಶಿಯಾಗಿರುವ ಬಸವರಾಜ್ ವರದಿಯನ್ನು ಮಂಡಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಉದಯಕುಮಾರ್‌ರವರು ಅಧ್ಯಕ್ಷತೆ ವಹಿಸಿದ್ದರು.



ಸರಕಾರಿ ಶಾಲೆಗಳ ಸಬಲೀಕರಣ ವರದಿಯ ಸಮಾಲೋಚನಾ ಸಭೆ

4. **ಹಾಸ್ಟೆಲ್ ನೀತಿ:** ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಜಾರಿಗೆ ತಂದ ವಸತಿ ನಿಲಯಗಳ ಕುರಿತ ನೀತಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮಾಲೋಚನಾ ಸಭೆಯನ್ನು 10.02.2018ರಂದು ಮಲ್ಲಿಕಟ್ಟೆಯ ಸುಮಾ ಸದನದ ಸಭಾಂಗಣದಲ್ಲಿ ನಡೆಯಿತು.

ಶಿಕ್ಷಣಾಸಕ್ತರು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ನೀತಿಯ ಬಗ್ಗೆ ಚರ್ಚಿಸಲಾಯಿತು. ಎಲ್ಲಾ ಶಾಲಾ ಕಾಲೇಜುಗಳ ವಸತಿನಿಲಯಗಳಲ್ಲಿ ಯಥಾವತ್ತು ಅನುಷ್ಠಾನ ಮಾಡುವಲ್ಲಿ ಸುತ್ತೋಲೆಯನ್ನು ಹೊರಡಿಸುವಂತೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.



ಹಾಸ್ಟೆಲ್ ನೀತಿ ಕುರಿತಂತೆ ಸಮಾಲೋಚನಾ ಸಭೆ

5 **ಚುನಾವಣಾ ಪ್ರಣಾಳಿಕೆ :** ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಮಕ್ಕಳ ಪರ ಬೇಡಿಕೆಗಳನ್ನು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅಳವಡಿಸುವ ಕುರಿತಂತೆ ಸಮಾಲೋಚನಾ ಸಭೆಯನ್ನು ಜಿಲ್ಲಾ ಹಂತದಲ್ಲಿ ಮಕ್ಕಳ ಜೊತೆ ಕೆಲಸ ಮಾಡುವ ವಿವಿಧ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಶಿಕ್ಷಣಾಸಕ್ತರ ಜೊತೆಗೆ ಸುಮಾ ಸದನ ಮಲ್ಲಿಕಟ್ಟೆಯಲ್ಲಿ ದಿನಾಂಕ 18.12.2017ರಂದು ನಡೆಸಲಾಯಿತು. ಈ ಸಮಾಲೋಚನೆಯಲ್ಲಿ ಒಟ್ಟು 19 ಅಂಶಗಳನ್ನು ಕ್ರೋಢಿಕರಿಸಿ ಇದನ್ನು ಸಂಬಂಧಪಟ್ಟ ಎಲ್ಲಾ ಪಕ್ಷಗಳಿಗೆ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಮನವಿ ಸಲ್ಲಿಸುವಂತೆ ನಿರ್ಣಯಿಸಲಾಯಿತು. ಶಿಕ್ಷಣಾಸಕ್ತರ ತಂಡವು ದ.ಕ ಜಿಲ್ಲೆಯ ಪ್ರಮುಖ 4 ಪಕ್ಷಗಳಿಗೆ ಭೇಟಿ ಮಾಡಿ ಈ ಮಕ್ಕಳ ಬೇಡಿಕೆಗಳನ್ನು ತಮ್ಮ ಪ್ರಣಾಳಿಕೆಯಲ್ಲಿ ಅಳವಡಿಸಿ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ರಕ್ಷಣೆ ನೀಡುವಂತೆ ಮನವಿ ಮಾಡಲಾಯಿತು. ಹಾಗೆಯೇ ಇದನ್ನು ರಾಜ್ಯ ಮಟ್ಟದ ಪಕ್ಷಗಳಿಗೂ ಪತ್ರ ವ್ಯವಹಾರ ನಡೆಸಲಾಯಿತು.

**6. ಎಸ್.ಡಿ.ಎಮ್.ಸಿ ಸಮಾವೇಶ:**

ಉಪ್ಪಿನಂಗಡಿಯ ಸ.ಹಿ. ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ




ಎಸ್.ಡಿ.ಎಮ್.ಸಿ. ಸಮಾವೇಶ

ಸಮಿತಿಯ ನೇತೃತ್ವದಲ್ಲಿ ಎಸ್.ಡಿ.ಎಮ್.ಸಿ ಸಮಾವೇಶವನ್ನು ನಡೆಸಲಾಯಿತು. ಡಾ. ನಿರಂಜನಾರಾಧ್ಯರವರು ದಿಕ್ಸೂಚಿ ಭಾಷಣ ಮಾಡಿದರು. ಡಾ. ಸುಕುಮಾರಗೌಡ, ಡಿಡಿಪಿಐ ಶಿವರಾಮಯ್ಯ, ಶಾಸಕಿ ಶಕುಂತಳಾ ಶೆಟ್ಟಿ, ಬಿಜೆಪಿ ಜಿಲ್ಲಾಧ್ಯಕ್ಷರಾದ ಸಂಜೀವ ಮಠಂದೂರು ಮತ್ತು ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

**6. ವಕಾಲತ್ತು :** ವಕ್ಫ್ ಇಲಾಖೆಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮದರಸಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ರಚಿಸುವ ಕುರಿತಂತೆ ವಕಾಲತ್ತು ಮಾಡಲಾಗಿ ವಕ್ಫ್ ಇಲಾಖೆಯು ಎಲ್ಲಾ ಮದರಸಗಳಲ್ಲಿ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವಂತೆ ನಿರ್ದೇಶನ ನೀಡಿತು.





**ಮದ್ರಸಗಳಲ್ಲಿ ಮಕ್ಕಳ ರಕ್ಷಣಾ ಸಮಿತಿ ರಚಿಸಲು ಸೂಚನೆ**

ಮಂಗಳೂರು, ಮಾ.19: ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016ರ ಪ್ರಕಾರ ಜಿಲ್ಲಾಧಿಕಾರಿಯ ಆದೇಶದ ಮೇರೆಗೆ ದ.ಕ. ಜಿಲ್ಲೆಯ ಎಲ್ಲ ವಕ್ಫ್ ಸಂಸ್ಥೆಯ ಮದ್ರಸಗಳಲ್ಲಿ ಕಡ್ಡಾಯವಾಗಿ ಸಲಹಾ ಪೆಟ್ಟಿಗೆ ಹಾಗೂ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಿ, ಮಕ್ಕಳ ಸಹಾಯವಾಣಿ ಸಂಖ್ಯೆ(1098)ಯನ್ನು ಸಂಸ್ಥೆಗಳಲ್ಲಿ ನಮೂದಿಸಲು ಹಾಗೂ ದೂರು ಪೆಟ್ಟಿಗೆಯನ್ನು ಕಡ್ಡಾಯವಾಗಿ ತೆರೆದು ಜಿಲ್ಲಾ ವಕ್ಫ್ ಕಚೇರಿಗೆ ಅಗತ್ಯವಾಗಿ ವರದಿ ಸಲ್ಲಿಸಬೇಕು ಎಂದು ವಕ್ಫ್ ಸಲಹಾ ಸಮಿತಿಯ ಅಧ್ಯಕ್ಷ ಹಾಜಿ ಯು.ಕೆ. ಮೋನು ಕಣಚೂರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ವಕ್ಫ ಸಲಹಾ ಸಮಿತಿಯ ಅಧ್ಯಕ್ಷರೊಂದಿಗೆ ವಕಾಲತ್ತು

**8. ಮಕ್ಕಳ ರಕ್ಷಣಾ ವ್ಯವಸ್ಥೆ ಬಲಪಡಿಸಲು ಸಮಾಲೋಚನಾ ಸಭೆ:** ದ.ಕ ಜಿಲ್ಲೆಯಲ್ಲಿ ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳ ಸಂಖ್ಯೆಗಳು ಹೆಚ್ಚಾಗುತ್ತಿದ್ದು ಅದರ ಕುರಿತಂತೆ ಮಕ್ಕಳ ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಮತ್ತು ಕಾವ್ಯಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಹೊರ ತಂದಿರುವ ವರದಿಯ ಅನುಷ್ಠಾನದ ಕುರಿತಂತೆ ಚರ್ಚೆ ನಡೆಸಲಾಯಿತು. 40 ಅಂಶಗಳ ಬೇಡಿಕೆಗಳ ಈಡೇರಿಕೆಗಾಗಿ ಜಿಲ್ಲಾಧಿಕಾರಿಗಳಿಗೆ ವಕಾಲತ್ತು ಮಾಡಲಾಯಿತು.



ಮಕ್ಕಳ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವ ಕುರಿತು ಸಮಾಲೋಚನಾ ಸಭೆ

# ಮಕ್ಕಳ ಸಂಪೂರ್ಣ ರಕ್ಷಣೆಗಾಗಿ ಸಹಾಯ ವಿಭಾಗ

**ದೂರು ದಾಖಲಾತಿಗಾಗಿ ಹೊಸ ವೆಬ್‌ಪೋರ್ಟಲ್**

ಪಡಿಯು ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಕಳೆದ ಎರಡು ದಶಕಗಳಿಂದ ಕೆಲಸ ನಿರ್ವಹಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳ ಮೇಲಿನ ದೌರ್ಜನ್ಯದ ಪ್ರಕರಣಗಳು ಬೆಳಕಿಗೆ ಬರುತ್ತಿದ್ದು ಚೈಲ್ಡ್‌ಲೈನ್ ಸಾಕಷ್ಟು ಕರೆಗಳು ಬರುತ್ತಿದೆ. ಅಲ್ಲದೆ ಚೈಲ್ಡ್‌ಲೈನ್‌ನ ಕಾರ್ಯವ್ಯಾಪ್ತಿ ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದರೂ ಚೈಲ್ಡ್‌ಲೈನ್ ಗ್ರಾಮೀಣ ಪ್ರದೇಶದಲ್ಲಿಂದಲೂ ಬಂದಂತಹ ಪ್ರಕರಣಗಳನ್ನು ಕೂಡಾ ನಿರ್ವಹಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಅಂತರ್ಜಾಲಗಳ ಬಳಕೆ ಹೆಚ್ಚಾಗಿ ಉಪಯೋಗವಾಗುತ್ತಿದ್ದು ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಪಡಿಯು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ದೂರುಗಳನ್ನು ದಾಖಲಿಸಲು ಅನುಕೂಲವಾಗುವಂತೆ ದೂರು ದಾಖಲಾತಿ ಪೋರ್ಟಲ್‌ನ್ನು ಆರಂಭಿಸಿದೆ.




ಈ ಹಿನ್ನಲೆಯಲ್ಲಿ ಪಡಿಯು ತನ್ನ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರಿಗೆ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ನಡೆದಿದ್ದಲ್ಲಿ ಅಥವಾ ತಮ್ಮ ಗಮನಕ್ಕೆ ಬಂದಲ್ಲಿ ತಾವೂ ಈ ಪ್ರಕರಣಗಳನ್ನು ಪಡಿ ವೆಬ್ ಸೈಟ್‌ನಲ್ಲಿ**(www.padivalored.com)** ದೂರು ದಾಖಲಿಸಲು ಅವಕಾಶ ಕಲ್ಪಿಸಲು ಹೊಸ ಪೋರ್ಟಲ್‌ನ್ನು ರೂಪಿಸಿದ್ದು ಇದರಲ್ಲಿ ಸಾರ್ವಜನಿಕರು ತಮ್ಮ ದೂರನ್ನು ದಾಖಲಿಸಬಹುದು ಬಂದಂತಹ ದೂರುಗಳನ್ನು ಸೂಕ್ತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಸೂಕ್ತ ಅನುಸರಣೆ ಮಾಡಲಾಗುವುದು.

**ಈ ಕೆಳಗಿನ ಪ್ರಮುಖ ವಿಚಾರಗಳ ಕುರಿತಂತೆ ತಾವೂ ದೂರನ್ನು ದಾಖಲಿಸಬಹುದು.**

1. ಮಕ್ಕಳ ಹಕ್ಕುಗಳ ಬಗ್ಗೆ ಮತ್ತು ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಯಾವುದೇ ಸಂದೇಹಗಳಿದ್ದರೆ
2. ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದ ಕುರಿತಂತೆ
3. ಶಾಲೆಗಳಲ್ಲಿ ಮಕ್ಕಳಿಗೆ ನೀಡುವ ಮನೋದೈಹಿಕ ದಂಡನೆಯ ಕುರಿತಂತೆ
4. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ/ಪೋಕ್ಸೋ ಪ್ರಕರಣಗಳು
5. ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಮತ್ತು ಶಾಲೆಗಳಲ್ಲಿ ಉದ್ಭವಿಸುವ ಮಕ್ಕಳ ಕುರಿತ ಸಮಸ್ಯೆಗಳು.
6. ಮಕ್ಕಳ ನಾಪತ್ತೆ ಮತ್ತು ಮಕ್ಕಳ ಸಾಗಾಟ ಮತ್ತು ಮಾರಾಟ ಪ್ರಕರಣಗಳು
7. ಮಕ್ಕಳ ಪಾಲನೆ ಮತ್ತು ಪೋಷಣೆಗೆ ಸಂಬಂಧಪಟ್ಟಂತೆ
8. ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳಿದ್ದರೆ.

**ನಮ್ಮೊಂದಿಗೆ ಕೈಜೋಡಿಸಿ:**

ಸಾಮಾಜಿಕ ಕಳಕಳಿಯೊಂದಿಗೆ ಸಮಾಜದ ಅಭಿವೃದ್ಧಿಗೆ ಕೊಡುಗೆಯನ್ನು ನೀಡಲು ಬಯಸುವ ಸಹೃದಯಿಗಳಿಗೆ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಇಚ್ಛಿಸುವುದಾದರೆ ನೀವು ನಮ್ಮೊಂದಿಗೆ ಕೈ ಜೋಡಿಸಬಹುದು. ವಿವಿಧ ಚಟುವಟಿಕೆಗಳ ಮೂಲಕ ಸಮುದಾಯವನ್ನು ತಲುಪಲು ಸಹಕಾರ ನೀಡಬಹುದು. ಅಲ್ಲದೆ ಮಕ್ಕಳ ಸಹಾಯವಾಣಿಗೆ ಸ್ವಯಂ ಸೇವಕರಾಗಿಯೂ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸದಸ್ಯರಾಗಿಯೂ ಕಾರ್ಯನಿರ್ವಹಿಸಬಹುದು.

ಪಡಿಯು 'ಸಪೋರ್ಟ್ ಎ ಚೈಲ್ಡ್' ಎಂಬ ಯೋಜನೆಯ ಮೂಲಕ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಹಣಕಾಸಿನ ನೆರವನ್ನು ನೀಡುತ್ತಿದೆ. ಈ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ತಾವೂ ಕೂಡಾ ಹಣಕಾಸಿನ ನೆರವನ್ನು ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ನಮ್ಮ ಸಂಸ್ಥೆಯನ್ನು ಸಂಪರ್ಕಿಸಿ.

ನಿರ್ವಹಣೆ
ರೆನ್ನಿ ಡಿ'ಸೋಜ

ಪ್ರಕಟಣೆ
ದಾಖಲಾತಿ, ಸಂಶೋಧನೆ ಮತ್ತು ತರಬೇತಿ ವಿಭಾಗ, ಪಡಿ

ಸಲಹೆ ಮತ್ತು ಸಹಕಾರ
ಪಡಿ ಬಳಗ

ವಿಳಾಸ: ಗುಣಾತ್ಮಕ ಶಿಕ್ಷಣಕ್ಕಾಗಿ, ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ
ಪಡಿ, ಗಣೇಶ, ಕೊಲಾಸೊ ಆಸ್ಪತ್ರೆಯ ಬಳಿ, 2ನೇ ಅಡ್ಡ ರಸ್ತೆ, ಬೆಂದೂರುವೆಲ್, ಮಂಗಳೂರು – 02.
ದೂರವಾಣಿ: 0824–2439895, www.padivalored.com